# ಅಜನೀಶ್ ಸವಾಲು, ಸಿನಿಮಾ ಪರೀಕ್ಷೆ

ಕನ್ನಡದ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್, ಸಿನಿಮಾ ನಿರ್ಮಾಣದಲ್ಲಿಯೂ ಹೆಜ್ಜೆಯಿರಿಸಿದ್ದು, ಅವರ ನಿರ್ಮಾಣದ ಮೊದಲ ಸಿನಿಮಾ ‘ಜಸ್ಟ್ ಮ್ಯಾರೀಡ್’ ಇದೇ ಆಗಸ್ಟ್ 22ಕ್ಕೆ ತೆರೆಕಾಣುತ್ತಿದೆ.

ಸಂಗೀತ ನಿರ್ದೇಶನದೊಂದಿಗೆ ಸಿನಿಮಾ ನಿರ್ಮಾಣದಲ್ಲಿಯೂ ಹೊಸ ಅನುಭವ ಪಡೆಯುತ್ತಿರುವ ಅವರು, ಇದು ತಮ್ಮ ಪಾಲಿಗೆ ಒಂದು ರೀತಿ ಸವಾಲು ಕೂಡ ಆಗಿತ್ತು ಎಂದು ಹೇಳಿಕೊಂಡಿದ್ದಾರೆ.

‘ಬೇರೆ ನಿರ್ದೇಶಕರೊಂದಿಗೆ ಕೆಲಸ ಮಾಡುವಾಗ ಅವರ ದೃಷ್ಟಿಕೋನವನ್ನು ಅರಿತು ಕೆಲಸ ಮಾಡಬಹುದು. ಈ ಸಿನಿಮಾದಲ್ಲಿ ಸ್ಕ್ರಿಪ್ಟ್ ಹಂತದಿಂದಲೇ ನಾನು ತೊಡಗಿಕೊಂಡಿದ್ದೆ. ನಮ್ಮದೇ ಸಿನಿಮಾ ಆಗಿದ್ದರಿಂದ ನನ್ನ ಕೆಲಸವನ್ನು ಜಡ್ಜ್ ಮಾಡಬೇಕಾದವನು ನಾನೇ ಆಗಿದ್ದೆ. ಇದು ಒಂದು ರೀತಿಯ ಸವಾಲು, ಪರೀಕ್ಷೆಯೇ ಆಗಿತ್ತು’ ಎಂದು ವಿವರಿಸಿದ್ದಾರೆ.

‘ಸಿನಿಮಾ ನಿರ್ಮಾಣದಲ್ಲಿ ತೊಡಗಿಕೊಳ್ಳಬೇಕು ಎನ್ನುವ ಮನಸ್ಸಿತ್ತು. ಸಿನಿಮಾ ನಿರ್ದೇಶಕಿ ಬಾಬಿ ಹಾಗೂ ನಾನು ಹಲವು ವರ್ಷಗಳಿಂದಲೂ ಸಿನಿಮಾರಂಗದಲ್ಲಿ ತೊಡಗಿಕೊಂಡಿದ್ದೇವೆ. ‘ಜಸ್ಟ್ ಮ್ಯಾರೀಡ್’, ನಮ್ಮ ನಿರ್ಮಾಣದ ಮೊದಲ ಸಿನಿಮಾ. ಚಿತ್ರ ನಿರ್ಮಾಣದಲ್ಲಿ ತೊಡಗಿಕೊಂಡಿದ್ದರೂ ಸಂಗೀತ ಎಂದಿಗೂ ನನ್ನ ಮೊದಲ ಆದ್ಯತೆ’ ಎಂದಿದ್ದಾರೆ.

ರಿಷಬ್ ಶೆಟ್ಟಿ ನಟನೆಯ ‘ಕಾಂತಾರ ಚಾಪ್ಟರ್ 1’, ದರ್ಶನ್ ಅಭಿನಯದ ‘ಡೆವಿಲ್’, ದುನಿಯಾ ವಿಜಿ ಅವರ ‘ಲ್ಯಾಂಡ್ ಲಾರ್ಡ್’ ಹಾಗೂ ಕಿಚ್ಚ ಸುದೀಪ್ ಅಭಿನಯದ ಸಿನಿಮಾವೊಂದರಲ್ಲಿ ಅಜನೀಶ್ ಬ್ಯುಸಿಯಾಗಿದ್ದಾರೆ. ■





# ಕಾಟೇರ ಬೆಡಗಿಯ ‘ನೆಕ್ಸ್ಟ್ ಲೆವೆಲ್’

‘ಕಾಟೇರ’ ಚಿತ್ರದ ಮೂಲಕ ಸಿನಿಮಾರಂಗಕ್ಕೆ ಎಂಟ್ರಿ ಕೊಟ್ಟಿದ್ದ ನಟಿ ಆರಾಧನಾ, ಒಂದೂವರೆ ವರ್ಷಗಳ ನಂತರ ಎರಡನೇ ಸಿನಿಮಾಗೆ ಅಣಿಯಾಗುತ್ತಿದ್ದಾರೆ.

ತಮ್ಮ ಚೊಚ್ಚಲ ಸಿನಿಮಾದಲ್ಲಿಯೇ ಸ್ಟಾರ್ ನಟನೊಂದಿಗೆ ಅಭಿನಯಿಸುವ ಅವಕಾಶ ಪಡೆದುಕೊಂಡಿದ್ದ ಆರಾಧನಾಗೆ ಎರಡನೇ ಸಿನಿಮಾದಲ್ಲಿಯೂ ಆ ಅದೃಷ್ಟ ಮುಂದುವರೆದಿದೆ. ನಟ ಉಪೇಂದ್ರ ಅವರೊಂದಿಗೆ ಆರಾಧನಾ ಕಾಣಿಸಿಕೊಳ್ಳುತ್ತಿದ್ದು, ತಮ್ಮ ಪಾಲಿಗೆ ಒದಗಿಬಂದಿರುವ ಅತ್ಯುತ್ತಮ ಸಿನಿಮಾ ಇದೆಂದೂ ಹೇಳಿಕೊಂಡಿದ್ದಾರೆ.

ಆರಾಧನಾ ಅಭಿನಯದ ಎರಡನೇ ಸಿನಿಮಾ ‘ನೆಕ್ಸ್ಟ್ ಲೆವೆಲ್’ ಸದ್ಯದಲ್ಲಿಯೇ ಸೆಟ್ಟೇರಲಿದೆ. ಇದು ಪ್ಯಾನ್ ಇಂಡಿಯಾ ಸಿನಿಮಾ ಆಗಿದ್ದು, ಪ್ರಿ ಪ್ರೊಡಕ್ಷನ್ ಕೆಲಸಗಳು ಆರಂಭವಾಗಿವೆ.

ಎರಡನೇ ಸಿನಿಮಾಗೆ ತಾವು ತೆಗೆದುಕೊಂಡ ಸಮಯದ ಬಗ್ಗೆ ಮಾತನಾಡಿರುವ ಅವರು, ‘‘ಉತ್ತಮ ಸಿನಿಮಾ ಅವಕಾಶಕ್ಕೆ ಕಾಯುವುದು ಅತ್ಯವಶ್ಯಕ. ಆ ಕಾಯುವಿಕೆ ನನ್ನ ಪಾಲಿಗೆ ವ್ಯರ್ಥವಾಗಿಲ್ಲ. ಒಂದು ಮೌಲ್ಯಯುತ ಅವಕಾಶವನ್ನೇ ನೀಡಿದೆ. ಈ ಒಂದೂವರೆ ವರ್ಷ ಸುಲಭವಾಗಿರಲಿಲ್ಲ. ಉತ್ತಮ ಸ್ಕ್ರಿಪ್ಟ್‌ಗಾಗಿ ಕಾಯುವುದರಲ್ಲಿ ತಪ್ಪಿಲ್ಲ ಎಂಬುದನ್ನು ನಾನು ಯಾವಾಗಲೂ ನಂಬಿದ್ದೆ. ‘ಕಾಟೇರ’ ಸಿನಿಮಾ ನಂತರ ನಿರೀಕ್ಷೆಗಳು ಹೆಚ್ಚಿದ್ದವು. ಹೀಗಾಗಿ ಸಿನಿಮಾ ಎಲ್ಲ ರೀತಿಯಿಂದಲೂ ಒಪ್ಪಿತವಾದರೆ ಮಾತ್ರ ಮುಂದೆ ಹೆಜ್ಜೆ ಇಡಬೇಕು ಎಂದುಕೊಂಡಿದ್ದೆ. ‘ನೆಕ್ಸ್ಟ್ ಲೆವೆಲ್’ ಆ ನಿರೀಕ್ಷೆಯನ್ನು ಮುಟ್ಟಿದೆ’’ ಎಂದು ವಿವರಿಸಿದ್ದಾರೆ.

‘ಕಾಟೇರ’ದಲ್ಲಿ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದ ಆರಾಧನಾ, ಈ ಸಿನಿಮಾದಲ್ಲಿ ಗ್ಲಾಮರಸ್ ಆಗಿ ಕಾಣಿಸಿಕೊಳ್ಳುವ ನಿರೀಕ್ಷೆಯಿದೆ. ಈ ಚಿತ್ರದಲ್ಲಿ ಸಿಎಂ ಮಗಳಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

‘ಸ್ಟೈಲಿಂಗ್ ಹಾಗೂ ಪಾತ್ರಗಳ ಎಮೋಷನಲ್ ಗ್ರಾಫ್ ಅನ್ನು ನಾನು ಎಕ್ಸ್‌ಪ್ಲೋರ್ ಮಾಡಲು ಬಯಸಿದ್ದೆ. ಈಗ ಆ ಸಮಯ ಬಂದಿದೆ. ನನಗೆ ಈ ಸಿನಿಮಾ ಕುರಿತಂತೆ ಕರೆ ಬಂದಾಗ ತುಂಬಾ ಎಕ್ಸೈಟ್ ಆಗಿದ್ದೆ. ಬೋಲ್ಡ್ ಅನ್ನಿಸುವ ಕಥಾ ನಿರೂಪಣೆ ಹೊಸ ಹುರುಪು ತಂದಿತು. ವಿಭಿನ್ನ ಧಾಟಿಯ ಸಿನಿಮಾಗಳಿಗೆ ಉಪೇಂದ್ರ ಅವರು ಹೆಸರಾದವರು. ಅವರನ್ನು ನಟನಾಗಿ ಮಾತ್ರವಲ್ಲ, ನಿರ್ದೇಶಕನಾಗಿಯೂ ಇಷ್ಟಪಡುತ್ತಿದ್ದೆ. ಈಗ ಅವರೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಸಿನಿಮಾರಂಗದಲ್ಲಿ ನಾವಿಡುವ ಪ್ರತಿ ಹೆಜ್ಜೆಯೂ ಮುಖ್ಯ, ಈ ಸಿನಿಮಾ ಉತ್ತಮ ನಡೆ ಎನ್ನಿಸುತ್ತಿದೆ’ ಎಂದು ಸಂತಸ ಹಂಚಿಕೊಂಡಿದ್ದಾರೆ. ■